-XII. ಚಟ್ನಹಳ್ಳಿ ಎಕ್ಸ್‌ಟೆನ್ಷನ ಸಮೀಪ ಇರುವ ಮಹಮ್ಮದೀಯರ ಸ್ಮಶಾನವನ್ನು ಬೇರೆಕಡೆಗೆ ತಗೆದುಹಾಕತಕ್ಕ ವಿಷಯದಲ್ಲಿ ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡು ಛೇರ್ಮನ್‌ರವರಿಂದ ತಲಪಿರುವ 21-12-08ನೆ ನಮ್ಬರ್ 824ನೆ ನಂಬರ್ ಲೆಟರ್.

ಮಿ|| ರಹಿಮತ್ತುಲ್ಲಾ ಅಹಮ್ಮದ್ ಸೇಟರವರು, ಮಿ|| ಮೊಹದೀ ಸಾಹೇಬರವರು, ಮಿ|| ಹಸೇನಲ್ಲಿಜೀಗ ಸಾಹೇಬರವರು ಮತ್ತು ಮೈಸೂರು ತಾಲ್ಲೂಕು ಅಮಲ್ದಾರ್‌ರವರು ಸಹ ವುಳ್ಳ ಸಬ್ ಕಮಿಟಿಗೆ ಇನ್‌ಸ್ಪೆಕ್ಷನ್ ಮಾಡಿ ರಿಪೋರ್ಟು ಮಾಡಲು ರಿಫರ್ ಮಾಡತಕ್ಕದ್ದೆಂದು ತೀರ್ಮಾನಿಸಿದೆ.

ಎಂ. ಜಿ. ಕೃಷ್ಣಸ್ವಾಮಿರಾವ್,
ವೈಸ್ ಪ್ರೆಸಿಡೆಂಟ್

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟ್‌ನಲ್ಲಿ.

ಸ್ರ 1908—09ನೆ ಇಸವಿ ಮಿ|| ಅರ್ಜೀ ನಂಬರ್ 668.

ಅರ್ಜೀದಾರ್ರು ಶಿಡ್ಲಘಟ್ಟದಲ್ಲಿರುವ ದಿಬ್ಬಗಿರಿ ಬಸಪ್ಪ, ಈರಪ್ಪ, ಮುನಿರುದ್ರಮ್ಮ ಮೈನರಾದ ಶಿಡ್ಲಘಟ್ಟ ಸ್ಥಳದ ಈರಪ್ಪ ವಗ್ಗೈರೇರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಈರಪ್ಪ ವಗ್ಗೈರೇರಿಗೆ ಮುಖ್ಯ ವಾರಸುದಾರ ಆಗಬೇಕೆಂಬ ಹಕ್ಕಿನಮೇಲೆ ಶಿಡ್ಲಘಟ್ಟ ಸ್ಥಳದ ಸದರೀ ಮೈನರಿನ ಆಸ್ತೀ ಕಾಪಾಡುವುದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜೀ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ರ 1909ನೆ ಇಸವಿ ಫೆಬ್ರವರಿ ತಿಂಗಳು ತಾರೀಖು 26ರಲ್ಲು ವೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸ್ರ 1909ನೆ ಇಸವಿ ಫೆಬ್ರವರಿ ತಿಂಗಳು 8ನೆ ತಾರೀಖಿನಲ್ಲಿ ಕೋರ್ಟ್ ವೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾವ್‌ಮೈಯರ್, ಸಬ್ ಜಡ್ಜ್.

ತಿ. ನರಸೀಪುರದ ತಾಲ್ಲೂಕು ಸೋಸಲೆಯಲ್ಲಿರುವ ಸಿದ್ದಲಿಂಗಂಣನವರ ಮಕ್ಕಳು ಸಿದ್ದಲಿಂಗಮರಿದೇವರು ಇದರಿಂದ ತಿಳಿಸುವುದೇನಂದರೆ—

ಅವಿಭಕ್ತ ಕುಟುಂಬಿಯಾದ ನಮ್ಮ ಅಣ್ಣ ಭೋಗ ನಂದ್ಗಪ್ಪನವರ ಮಗ ಬಸವಣ್ಣನ ಹೆಂಡತಿ ಬಸವಮ್ಮನು ಮಕ್ಕಳಿಲ್ಲದವಳಾಗಿ ನನ್ನ ಪೋಷಣೆಯಲ್ಲಿಯೇ ಇದ್ದು, ಕೆಲವರು ತುಂಟಜನರ ದುರ್ಬೋಧನೆಯಿಂದ ಸ್ವತಂತ್ರಿಸಿ ನಡೆಯುತ್ತಾ ಸೋಸಲೆ ಗ್ರಾಮದಲ್ಲಿ ನನ್ನ ಸ್ವಾಧೀನಾನುಭವದಲ್ಲಿರುವ ಜಮೀನುಗಳ ಪೈಕಿ 1ನೆ ನಂಬರ್ ಖಾತೆಯು ತನ್ನ ಹೆಸರಿನಲ್ಲಿದೆ ಎಂಬದರಮೇಲೆ ಸರ್ವೆ ನಂಬರು 1, 7, 15-2, 643 ಜಮೀನುಗಳನ್ನು ಆಧಾರ, ಭೋಗ್ಯ, ಕ್ರಯ, ಗೇಣಿ ವೊದಲಾದ ವ್ಯವಹಾರ ನಡಿಸುವದಾಗಿ ತಿಳಿಯುಬರುತ್ತೆ. ಇವಳಿಗೆ ಈ ಹಕ್ಕು ಇರುವುದಿಲ್ಲವಾಗಿ ಮೇಲ್ಕಂಡ ಜಮೀನುಗಳ ಸಂಬಂಧವಾಗಿ ಅಥವಾ ಬೇರೆ ವಿಧವಾಗಿ ಇವಳು ಮಾಡಿದ ಲೇವಾದೇನಿಗೆ ನಾನು ಮತ್ತು ಕುಟುಂಬದ ಚರ, ಸ್ಥಿರ ಆಸ್ತಿಗಳು ಈಡಾಗಲಾರವೆಂದು ಸಮಸ್ತರಿಗೂ ಇದರಿಂದ ತಿಳಿಸಿರುತ್ತೇನೆ.

ತಾರೀಖು 9ನೆ ಫೆಬ್ರವರಿ 1909. ಸಿದ್ದಲಿಂಗಮರಿದೇವರು.